ಸಾಕ್ಷಿಯನ್ನು ದಿ: 12.03.2026 ರಂದು ಪುನಃ ಕರೆಸಿ ಪ್ರಮಾಣ ಮಾಡಿಸಲಾಯಿತು. ಡಿ.ಡಬ್ಲ್ಯೂ–1

**ಪಾಟೀಸವಾಲುಃ– ವಾದಿಗಳ ಪರ ವಕೀಲರಿಂದ:–**

1. ನಾನು ಮಾರಾಟ ಮಾಡಿರುವ ನಿವೇಶನವನ್ನು ನಾನು ನೋಡಿರುತ್ತೇನೆ. ಈಗ ನಾನು ನೋಡುತ್ತಿರುವ ಭಾವಚಿತ್ರಗಳು ಸದರಿ ಸೈಟಿಗೆ ಸಂಬಂಧಿಸಿದ್ದವು ಎಂದರೆ ಸರಿ. ಸದರಿ ಭಾವಚಿತ್ರಗಳನ್ನು ಸಾಕ್ಷಿ ನೋಡಿ ಒಪ್ಪಿದ್ದರಿಂದ ಅವುಗಳನ್ನು ನಿಪಿ.14 ಮತ್ತು 15 ಎಂದು ಗುರುತಿಸಲಾಯಿತು. ಈಗ ನಾನು ನೋಡುತ್ತಿರುವ ಭಾವಚಿತ್ರದಲ್ಲಿ ದಾವಾ ಆಸ್ತಿಯ ದಕ್ಷಿಣ ದಿಕ್ಕಿಗೆ ಇರುವ ರಸ್ತೆಯಿದೆ ಎಂದರೆ ಸರಿ. ಸದರಿ ರಸ್ತೆಯನ್ನು ಈ ದಿನಕ್ಕಿಂತ 3 ತಿಂಗಳ ಹಿಂದೆ ನನ್ನ ತಮ್ಮನ ಮಗನಾದ ಚಂದ್ರಶೇಖರ್ ರವರು ಜೆ.ಸಿ.ಬಿ ಮೂಲಕ ಮಟ್ಟ ಮಾಡಿದ್ದಾರೆಂದರೆ ಸರಿ. ಸದರಿ ಭಾವಚಿತ್ರಗಳನ್ನು ಸಾಕ್ಷಿ ನೋಡಿ ಒಪ್ಪಿದ್ದರಿಂದ ಅದನ್ನು ನಿಪಿ.16 ಎಂದು ಗುರುತಿಸಲಾಯಿತು.
2. ಈಗ ನಾನು ನೋಡುತ್ತಿರುವ ಭಾವಚಿತ್ರದ ಪ್ರಕಾರ ರಸ್ತೆಯನ್ನು ಸೇರಿಸಿ ಸದರಿ ಚಂದ್ರಶೇಖರ್ ರವರು ಮಟ್ಟ ಮಾಡಿದ್ದಾರೆಂದರೆ ಸರಿ. ಸದರಿ ಭಾವಚಿತ್ರವನ್ನು ಸಾಕ್ಷಿ ನೋಡಿ ಒಪ್ಪಿದ್ದರಿಂದ ಅದನ್ನು ನಿಪಿ.17 ಎಂದು ಗುರುತಿಸಲಾಯಿತು. ನಾನು ದಾಸಪ್ಪರವರಿಗೆ ಮಾರಾಟ ಮಾಡಿರುವ ನಿವೇಶನದ ದಕ್ಷಿಣ ದಿಕ್ಕಿಗೆ 18 ಅಡಿ ರಸ್ತೆಯಿದೆ ಎಂದರೆ ಸರಿ. ಸದರಿ ರಸ್ತೆ ಹಾಗೂ ನಿವೇಶನವನ್ನು ಸೇರಿಸಿ ನಾನು ಮಾರಾಟ ಮಾಡಿದ್ದೇನೆಂದರೆ ಸರಿಯಲ್ಲ. ಸದರಿ 18 ಅಡಿ ರಸ್ತೆಯ ಮೇಲೆ ನನಗೆ ಯಾವುದೇ ಹಕ್ಕಿಲ್ಲ ಎಂದರೆ ಸರಿ. ವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ನಾನು ಹಾಗೂ ಚಂದ್ರಶೇಖರ್ ರವರು ನಿವೇಶನವನ್ನು ಒಟ್ಟಾಗಿ ಮಟ್ಟ ಮಾಡಿಸಿ ಮಾರಾಟ ಮಾಡಲು ಪ್ರಯತ್ನಿಸಿದ್ದೇವೆಂದರೆ ಸರಿಯಲ್ಲ. ಸದರಿ 18 ಅಡಿ ರಸ್ತೆಯನ್ನು ಬಿಡಿಸಿಕೊಳ್ಳಲು ನಮಗೆ ಯಾವುದೇ ತೊಂದರೆಯಿಲ್ಲ ಎಂದರೆ ಸಾಕ್ಷಿಯು ನಾವು 27 ವರ್ಷಗಳ ಹಿಂದೆ ವಾದಿಯರಿಗೆ ಬಿಟ್ಟುಕೊಟ್ಟಿದ್ದೇವೆಂದು ನುಡಿಯುತ್ತಾರೆ. ಸದರಿ ರಸ್ತೆಯನ್ನು ನ್ಯಾಯಾಲಯದಿಂದ ಕಮಿಷನರ್ ನೇಮಕ ಮಾಡಿ ಗುರುತಿಸಲು ನನಗೆ ತಕರಾರು ಇಲ್ಲ.

**ಮರು ವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನದ ಮೂಲಕ ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.

ಪ್ರಧಾನ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ
ಮಳವಳ್ಳಿ